## ಕೋರಿಕೆ



ಕಚ್ಚಲು ಮನಸಾಗುವುದಿಲ್ಲ
ಈ ಸುಂದರಾಂಗನ
ಚೆಂದದ ಕೈಬೆರಳುಗಳ

ರೋಷ–ದ್ವೇಷ ನುಂಗಿ
ಇವನ ಮುಷ್ಟಿಯಲಿ
ಅವನತ ಮುಖಿಯಾಗಿ
ಸೆರೆಯಾಗಿರುವೆ.

ಯಾರ ಮೇಲೆ ಎಸೆಯುವ
ಯಾವ ಹುನ್ನಾರವೋ,
ನನ್ನನ್ನೇ ಹಗ್ಗವಾಗಿ
ತೋರುವ ಜಾದೂ ಪ್ರದರ್ಶನವೋ!

ವಿನಯದಿಂದಲಿ ಇವನ
ಬೇಡಿಕೊಳ್ಳುವ ಹೀಗೆ–
ಕಿಂಚಿತ್ತು ಕೃಪೆ ಮಾಡಿ
ಬೆರಳ ತುಸು ಸಡಿಲಿಸು
ನನ್ನ ಪಾಡಿಗೆ ನಾನು
ಹರಿದು ಹೋಗುವೆ
ನನಗಿಷ್ಟು ಸಹಕರಿಸು!

● **ಸುಧಾ ಜಯಪ್ರಕಾಶ ತಲವಾಟ**

## ಮಸಲತ್ತು

ಹಿಂದೆ ಕೈ ಕಟ್ಟುವುದು ಸಭ್ಯ
ನಡೆಯೆಂದು ತಿಳಿದಿದ್ದೆ.
ಕೈಗಳ ಹಿಂದಿದ್ದ ಕೈವಾಡ
ಊಹಿಸಲು ಮರೆತಿದ್ದೆ

ಯಾರ ಕಾಲಲ್ಲಿ ಬಿಡಲು ಹಾವು
ಪಿತೂರಿ, ಆತನಿಗೇ ಗೊತ್ತು.
ನನ್ನ ನೋಯಿಸಿದವರಿಗೇ ಕಚ್ಚುವೆ
ಎನ್ನುವದು ಉರಗದ ಮಸಲತ್ತು.
ಎದುರು ಕಾಣಲಿಲ್ಲ
ದುರಾಲೋಚನೆ, ದರ್ಪ
ಭಸ್ಮಾಸುರನನ್ನು ನೆನೆಸೀತು
ನೇಪಥ್ಯದ ಕಾಳಸರ್ಪ

‘ಮೋರೆ ನೋಡಿ ಮರುಳಾಗದಿರು’
ಹಿರಿಯರು ಹೇಳಿದ್ದ ಎಚ್ಚರಿಕೆ ಮಾತು
ಉಪೇಕ್ಷಿಸಿ ಮುಂದೆ ಸಾಗಿದರೆ
ಗೆದ್ದ ಆಟವನ್ನೂ ಹೋದಂತೆ ಸೋತು.

● **ದೀಪಕ ಜೋಶಿ**